The Hon'ble Sri H. SIDDAIYA.—In fact we have received a report both from the Deputy Commissioner and from the Senior Surgeon on 10th September 1951 and the matter will be expedited.

Bad condition of Channapatna-Sathanur Road.

Q.—58. **Sri S. KARIAPPA** (Bangalore District—General).—

Will the Government be pleased to state.—

(*a*) the number of buses that ply in the Channapatna-Sathanur Road;

(*b*) the condition of the road at present?

A.—**The Hon'ble Sri T. MARIAPPA** (Home Minister).—

(*a*) Eight.

(*b*) Not good.

ಶ್ರಿ ಎಸ್. ಕರಿಯಪ್ಪನವರು.—ಈ ಚನ್ನಪಟ್ಟಣ-ಸಾತನೂರು ರಸ್ತೆ ಎಷ್ಟು ವರ್ಷಗಳಿಂದ ಇದೇ ಸ್ಥಿತಿಯಲ್ಲಿ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ವರ್ಷದಿಂದ ಈ ರೀತಿ ನಾದುರಸ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ನಾನು ಕಂಡ ಹಾಗೆ 7-8 ವರ್ಷದಿಂದ ಈ ಸ್ಥಿತಿಯಲ್ಲಿದೆ ಎಂದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಸುಮಾರಾಗಿತ್ತು. ಬಸ್ಸುಗಳು ಓಡಾಡುವುದು ಜಾಸ್ತಿ ಆದಮೇಲೆ ವೇರ್ ಔಟ್ ಜಾಸ್ತಿಯಾಗಿದೆ. ಈಗ 3-3½ ವರ್ಷದಿಂದ ನಾದುರಸ್ತಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಇದಕ್ಕೆ ಸಾಲಾ ಬಾದು ಕಾಮಗಾರಿಗಾಗಿ ಮೈಲಿ ಒಂದಕ್ಕೆ ಎಷ್ಟು ರೂಪಾಯಿ ಒದಗಿಸಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು 200 ರೂಪಾಯಿ ಇತ್ತು. ಈಗ ರೀಕ್ಲಾಸಿಫಿಕೇಷನ್ ಕಮಿಟಿ ತೀರ್ಮಾನದ ಪ್ರಕಾರ 400 ರೂಪಾಯಿ ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಸ್ಪೆಷಲ್ ಗ್ರಾಂಟ್ ಕೊಟ್ಟು ರಸ್ತೆ ದುರಸ್ತು ಮಾಡತಕ್ಕ ಇಚ್ಛೆ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 4,200 ರೂಪಾಯಿ ಸ್ಪೆಷಲ್ ಗ್ರಾಂಟ್ ಕೊಟ್ಟಿದ್ದೇವೆ. ಅದನ್ನು ಈ ವರ್ಷ ಖರ್ಚು ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಮೂರು ವರ್ಷಕ್ಕೆ ಮುಂಚೆ ಎಷ್ಟು ಬಸ್ಸುಗಳು ಓಡಾಡುತ್ತಾ ಇದ್ದವು ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡರು.—ಈಗ ಆ ರಸ್ತೆಯಲ್ಲಿ 8 ಬಸ್ಸುಗಳು ಓಡಾಡುತ್ತಿರುವುದು ಜಾಸ್ತಿ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೂ ಸಾಲದು, ಇನ್ನೂ ಜಾಸ್ತಿ ಬೇಕು ಎಂದು ಕೇಳುವವರೂ ಇದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಈ 8 ಬಸ್ಸುಗಳು ಓಡಾಡುವುದಕ್ಕೆ ಪ್ರಾರಂಭವಾದ ಮೇಲಲ್ಲವೇ ರಸ್ತೆ ನಾದುರಸ್ತಾದುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೊಂದೇ ಕಾರಣ ಅಲ್ಲ. ಗ್ರಾಂಟು ಕಮ್ಮಿ ಇತ್ತು. ಆದ್ದರಿಂದ ರೀಕ್ಲಾಸಿಫಿಕೇಷನ್ ಕಮಿಟಿಯವರು ಜಾಸ್ತಿ ಕೊಡಬೇಕೆಂದು ಹೇಳಿದ ಮೇಲೆ 400 ರೂಪಾಯಿ ಕೊಟ್ಟಿದ್ದೇವೆ. ಅಲ್ಲದೆ ಸ್ಪೆಷಲ್ ಗ್ರಾಂಟು 4,200 ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಆ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡ್ ಫಂಡಿನಿಂದ ಕೊಟ್ಟಿದ್ದೀರಾ, ಅಥವಾ ಸರ್ಕಾರದವರೇ ನೇರವಾಗಿ ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Rules for grant of Bus Permits to private individuals or institutions.

Q.—156. **Sri T. RAMACHAR** (Kolar District—General).—

Will the Government be pleased to state.—

the rules, if any, framed by them for the grant of bus permits to private individuals or institutions?

A.—**The Hon'ble Sri T. MARIAPPA** (Home Minister).—

(*a*) The grant of permits for stage carriages (buses) is governed by the provisions of Sections 46 to 48 of the Indian Motor Vehicles Act, 1939, and of Chapter IV of the Mysore Motor Vehicles and Road Traffic Rules, 1945. A copy indicating the relevant provisions is laid on the Table of the House.

(Copy placed in the Assembly Library, No. 20.)

ಶ್ರೀ ಟಿ. ರಾಮಾಚಾರ್ಯರು.—ಈಚೆಗೆ ಒಂದೆರಡು ವರ್ಷಗಳಿಂದ ಈ ನಿಬಂಧನೆಗಳನ್ನು ಅನುಸರಿಸಿಲ್ಲ, ಅವು ಆಚರಣೆಯಲ್ಲಿಲ್ಲ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಚರಣೆಯಲ್ಲಿವೆ.

ಶ್ರೀ ಟಿ. ರಾಮಾಚಾರ್ಯರು.—ಈಗ ಒಂದೆರಡು ವರ್ಷಗಳಿಂದ ಆಚರಣೆಯಲ್ಲಿಲ್ಲದೆ ನೇರವಾಗಿ ಸರ್ಕಾರದ ವರಿಗೇ ಅರ್ಜಿ ಬಂದು ತೀರ್ಮಾನವಾಗುತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾತ್ಕಾಲಿಕವಾಗಿ ಕೊಡಬಹುದು ಎಂಬುದಾಗಿ ಅದಕ್ಕೂ ಅಧಿಕಾರ ಏದೆ.

ಶ್ರೀ ಟಿ. ರಾಮಾಚಾರ್ಯರು.—ಹಾಗೆ ಕೊಡುವುದರಿಂದ ಈ ನಿಯಮಗಳನ್ನು ಉಲ್ಲಂಘನೆಮಾಡಿ ಪ್ರಭಾವ ಶಾಲಿಗಳಾದ ಕೆಲವರಿಗೆ ಅವಕಾಶ ಕೊಟ್ಟು ಇತರರಿಗೆ ಅವಕಾಶವಿಲ್ಲದಂತಾಗುತ್ತಿದೆಯಲ್ಲವೆ?